ಕರ್ನಾಟಕ ವಿದ್ಯುತ್ ನಿಗಮಕ್ಕೆ ನೀಡಬೇಕಾದ ಬಾಕಿ ಮೊತ್ತ

2722 (3237) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಕೆ.ಪಿ.ಟಿ.ಸಿ.ಎಲ್ (ಕರ್ನಾಟಕ ವಿದ್ಯುತ್ ಪ್ರಸರಣ ನಿಗಮನಿಯಮಿತ) ಸಂಸ್ಥೆಯು ಕೆ.ಪಿ.ಸಿ.ಗೆ (ಕರ್ನಾಟಕ ವಿದ್ಯುತ್ ನಿಗಮಕ್ಕೆ) ಎಷ್ಟು ಹಣ ಯಾವ್ಯಾವ ವರ್ಷಗಳಲ್ಲಿ ನೀಡಬೇಕಾಗಿದೆ

ಆ) ಕೆ.ಪಿ.ಟಿ.ಸಿ.ಎಲ್ - ಕೆ.ಪಿ.ಸಿ.ಗೆ ನೀಡಬೇಕಾದ ಬಾಕಿಯನ್ನು ನೀಡದೆ ಇರುವುದರಿಂದ ಕೆ.ಪಿ.ಸಿ ಆರ್ಥಿಕವಾಗಿ ಸಬಲವಾಗುವುದಕ್ಕೆಅಡ್ಡಿಯಾಗಿದೆ ಎಂಬ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ರಾಜ್ಯ ಸರ್ಕಾರ ಕಳೆದ ವರ್ಷದವರೆಗೆ ಪ್ರತಿ ವರ್ಷ ಕೆ.ಪಿ.ಸಿ. ಹಾಗೂ ಕೆ.ಪಿ.ಟಿ.ಸಿ.ಎಲ್. ಗೆ ನೀಡಿರುವ ಸಬ್ಸಿಡಿ ಮೊತ್ತ ಎಷ್ಟು?

ಶ್ರೀ ವೀರಕುಮಾರ್ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮನಿಯಮಿತವು ಕರ್ನಾಟಕ ಪವರ್ ಕಾರ್ಪೊರೇಷನ್ ಸಂಸ್ಥೆಗೆ ಕಳೆದ ಐದು ವರ್ಷಗಳಲ್ಲಿ ವರ್ಷವಾರು ನೀಡಬೇಕಾದ ವಿದ್ಯುತ್ ಖರೀದಿ ಬಿಲ್ಲು ಹಾಗೂ ವಿಳಂಬ ಪಾವತಿಗಾಗಿ ಬಡ್ಡಿ ಹಣದ ವಿವರಗಳು ಕೆಳಕಂಡಂತಿದೆ.

ಕ್ರಮ ಸಂಖ್ಯೆ	ವರ್ಷ	ವಿದ್ಯುತ್ ಖರೀದಿ ಬಿಲ್ (ಅಸಲು ಹಣ) (ಕೋಟಿ ರೂ. ಗಳಲ್ಲಿ)	ವಿಳಂಬ ಪಾವತಿಗೆ ಬಡ್ಡಿ (ಕೋಟಿ ರೂ.ಗಳಲ್ಲಿ)	ಒಟ್ಟು ಮೊತ್ತ (ಕೋಟಿ ರೂ.ಗಳಲ್ಲಿ)
1.	1994-95	207.12	73.76	280.88
2.	1995-96	268.63	103.34	371.97
3.	1996-97	284.50	128.44	412.94
4.	1997-98	526.09	164.26	690.35
5.	1998-99	350.13	193.62	543.75

ಕ.ವಿ.ಪ್ರ.ನಿ.ನಿ.ಯು ಮಾರ್ಚ್-2000ದ ಅಂತ್ಯಕ್ಕೆ ನೀಡಬೇಕಾದ ವಿದ್ಯುತ್ ಖರೀದಿ ಬಾಬ್ತು ಬಾಕಿ ರೂ. 350.08 ಕೋಟಿಗಳಿರುತ್ತದೆ. ಇದರಲ್ಲಿ ವಿದ್ಯುತ್ ಖರೀದಿ ಬಿಲ್ ಅಸಲು ಬಗ್ಗೆ ರೂ. 156.46 ಕೋಟಿ ಹಾ ಗೂ ವಿಳಂಬ ಪಾವತಿಗೆ ಬಡ್ಡಿ ಬಗ್ಗೆ 193.62 ಕೋಟಿ ರೂ. (31-3-99ರವರೆಗೆ) ಸೇರಿರುತ್ತದೆ.

ಆ) ಬಂದಿದೆ.

ಇ) ರಾಜ್ಯ ಸರ್ಕಾರವು ಕೆ.ವಿ. ಪ್ರ.ನಿ.ನಿಗೆ ಕಳೆದ 5 ವರ್ಷಗಳಿಂದ ನೀಡಿರುವ ಸಬ್ಸಿಡಿ ಧನದ ವರ್ಷವಾರು ವಿವರಗಳು ಕೆಳಕಂಡಂತಿವೆ.

ಕ್ರಮ ಸಂಖ್ಯೆ	ವರ್ಷ	ನೀಡಿರುವ ಸಹಾಯಧನ (ಕೋಟಿ ರೂ. ಗಳಲ್ಲಿ)	
		ಕೆ. ಪಿ. ಟಿ. ಸಿ. ಎಲ್	ಕೆ. ಪಿ. ಸಿ. ಎಲ್
1.	1994-95	208. 10	ರಾಜ್ಯ ಸರ್ಕಾರ
2.	1995-96	409. 10	ಯಾವುದೇ ಸಬ್ಸಿಡಿ
3.	1996-97	679. 99	ನೀಡುತ್ತಿಲ್ಲ
4.	1997-98	539.04	
5.	1998-99	670.00	

ಅಧ್ಯಕ್ಷರು : ನಾವು 12 ಗಂಟೆಗೆ ಪ್ರಶ್ನೋತ್ತರ ವೇಳೆಯನ್ನು ಮುಕ್ತಾಯಗೊಳಿಸುತ್ತೇವೆಂದು ಹೇಳಿದ್ದೇವೆ. ಈಗ ಇನ್ನು ಉಳಿದಿರುವಂತಹ ತಡೆಹಿಡಿಯಲಾದ ಪ್ರಶ್ನೆಗಳನ್ನು ಈ ವಾರದಲ್ಲಿ ಸಮಯ ಸಿಕ್ಕರೆ ತೆಗೆದುಕೊಳ್ಳುತ್ತೇವೆ. ಈಗ ಸಭೆಯನ್ನು ಅರ್ಧಗಂಟೆಯ ಕಾಲ ಮುಂದೂಡಿ ನಂತರ ಸೇರುತ್ತದೆ.

(ಸಭೆಯ ಮತ್ತೆ ಅರ್ಧ ಗಂಟೆಯ ನಂತರ ಸೇರಲು ನಿಶ್ಚಯಿಸಿತು)

4. **<u>ಅಧ್ಯಕ್ಷರ ಅಪ್ಪಣೆ ಮೇರೆಗೆ</u>**

ವಿಷಯ : ಚುನಾವಣಾ ಆಯೋಗವು ಜಿಲ್ಲಾ ಪಂಚಾಯತ್ ತಾಲ್ಲೂಕ್ ಪಂಚಾಯತ್ ಚುನಾವಣೆ ಘೋಷಿಸಿರುವುದರಿಂದ ಸದನವನ್ನು ಮುಂದುವರಿಸದಿರಲು ಒತ್ತಾಯ

ಹಾಗೂ

ಸಭಾತ್ಯಾಗ.

ಸಭೆಯು 4- 10 ಗಂಟೆಗೆ ಪ್ರಾರಂಭವಾಯಿತು.

(ಮಾನ್ಯ ಅಧ್ಯಕ್ಷರು) ಪೀಠವನ್ನು ಅಲಂಕರಿಸಿದ್ದರು

+ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಬೆಳಿಗ್ಗೆಯಿಂದ ಇಲ್ಲಿಯವರೆಗೂ ತಮ್ಮ ಕೊಠಡಿಯಲ್ಲಿ ಮತ್ತು ಬಿ.ಎ.ಸಿ ಮೀಟಿಂಗ್‌ನಲ್ಲಿ ಇವತ್ತು ಬೆಳಿಗ್ಗೆ ನಾವು ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದೆವು, ಅಂದರೆ ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಚುನಾವಣೆಗಳನ್ನು ಚುನಾವಣಾ ಆಯೋಗ ಘೋಷಣೆ ಮಾಡಿರತಕ್ಕಂಥಾದ್ದು, ಮತ್ತು ಈ ಸಂದರ್ಭದಲ್ಲಿ ನಾವು ಈ ಸದನವನ್ನು ಈಗಾಗಲೇ ಫಿಕ್ಸ್ ಮಾಡಿರುವ ರೀತಿಯಲ್ಲಿ 5ನೇ ತಾರೀಖಿನವರೆಗೂ ನಡೆಸಬೇಕೇ ಅಥವಾ ಮುಂದೂಡಬೇಕೇ ಎನ್ನುವ ಬಗ್ಗೆ ಚರ್ಚೆ ನಡೆಯಿತು. ಇವತ್ತು ಬೆಳಿಗ್ಗೆ ಸಹ ನಾವು ಮಾನ್ಯ ಅಧ್ಯಕ್ಷರಲ್ಲಿ ಮತ್ತು ಸರ್ಕಾರದಲ್ಲಿ ವಿನಂತಿ ಮಾಡಿಕೊಂಡಿದ್ದೆವು. ಚುನಾವಣಾ ಆಯೋಗವು ಕ್ಯಾಲೆಂಡರ್ ಆಫ್ ಈವೆಂಟ್ಸ್‌ನ್ನು 29ನೇ ತಾರೀಖು ಘೋಷಣೆ ಮಾಡಿದೆ. ದಿನಾಂಕ 10ರಂದು ಅಧಿಸೂಚನೆಯನ್ನು ಹೊರಡಿಸುವಂತಾದ್ದು, ಈ ಸಂದರ್ಭದಲ್ಲಿ ಚುನಾವಣಾ ನೀತಿ ಸಂಹಿತೆ 29ನೇ ತಾರೀಖಿನಿಂದಲೇ